**ಮೇ. ನಾರಂಜಾ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ, ಬೀದರ ಜಿಲ್ಲೆ, ಬೀದರ ತಾಲ್ಲೂಕು, ಇಮಾಮಪೂರ ಗ್ರಾಮದಲ್ಲಿ ಹೊಸದಾಗಿ 120 ಕೆ.ಎಲ್.ಪಿ.ಡಿ. ಕಾಕಂಬಿ ಆಧಾರಿತ ಉದ್ದೇಶಿತ ಡಿಸ್ಟಿಲರಿ/ಎಥೆನಾಲ್ ಘಟಕ ಸ್ಥಾಪಿಸುವ ಕುರಿತು ಮಾನ್ಯ ಜಿಲ್ಲಾಧಿಕಾರಿಗಳು, ಬೀದರ ಜಿಲ್ಲೆ, ಬೀದರ ಇವರ ಅಧ್ಯಕ್ಷತೆಯಲ್ಲಿ ನಡೆದ ಪರಿಸರ ಸಾರ್ವಜನಿಕ ಆಲಿಕೆ ಸಭೆಯ ನಡುವಳಿಗಳು:**

ದಿನಾಂಕ : **28/11/2022**
ಸಮಯ : **ಬೆಳಿಗ್ಗೆ 11.00 ಗಂಟೆಗೆ**
ಸ್ಥಳ : **ಮೆ. ನಾರಂಜಾ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಇಮಾಮಪೂರ, ತಾ॥ ಜಿ॥ ಬೀದರ – 585 402.**

ಸದರಿ ಸಾರ್ವಜನಿಕ ಆಲಿಕೆ ಸಭೆಯನ್ನು ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ ಭಾರತ ಸರ್ಕಾರದ ಪರಿಸರ ಆಘಾತ ಅಧ್ಯಯನದ ಅಧಿಸೂಚನೆ ದಿನಾಂಕ 14-09-2006ರ ತಿದ್ದುಪಡಿ ದಿನಾಂಕವು 01-12-2009 ರ ಮೇರೆಗೆ ಶ್ರೀ. ಗೋವಿಂದ ರೆಡ್ಡಿ, ಐಎಎಸ್ ಜಿಲ್ಲಾಧಿಕಾರಿಗಳು, ಬೀದರ ಜಿಲ್ಲೆ, ಬೀದರ ಇವರ ಅಧ್ಯಕ್ಷತೆಯಲ್ಲಿ ಜರುಗಿಸಲಾಯಿತು.

**ಸಭೆಗೆ ಹಾಜರಿದ್ದ ಅಧಿಕಾರಿಗಳು**

| | |
|---|---|
| 01. | ಶ್ರೀ.ಎಸ್. ಮಧುಸುದನ, ಹಿರಿಯ ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ವಲಯ ಕಛೇರಿ, ಕಲಬುರಗಿ. |
| 02. | ಶ್ರೀ. ಗೋಪಾಲಕೃಷ್ಣ ಬಿ. ಸಣತಂಗಿ, ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಪ್ರಾದೇಶಿಕ ಕಛೇರಿ, ಬೀದರ. |

| ಮೆ: ನಾರಂಜಾ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ, ಬೀದರ ಜಿಲ್ಲೆ , ಸಂಸ್ಥೆಯ ಪ್ರತಿನಿಧಿಗಳು (ಯೋಜನೆಯ ಪ್ರತಿಪಾದಕರು) | | |
|---|---|---|
| 1 | ಶ್ರೀ. ಡಿ.ಕೆ.ಸಿದ್ರಾಮ | ಅಧ್ಯಕ್ಷರು |
| 2 | ಶ್ರೀ. ಬಾಲಾಜಿ ಚವ್ಹಾಣ | ಉಪ ಅಧ್ಯಕ್ಷರು |
| 2 | ಶ್ರೀ. ಬಿ.ಎಸ್.ಅಪರಂಜಿ | ವ್ಯವಸ್ಥಾಪಕ ನಿರ್ದೇಶಕರು |
| 3 | ಶ್ರೀ. ಝುರೇಪ್ಪ ಮಮದಾಪೂರೆ | ನಿರ್ದೇಶಕರು |
| 4 | ಶ್ರೀ. ಸಿದ್ರಾಮ ತಂದೆ ದಾದಾರಾವ | ನಿರ್ದೇಶಕರು |
| 5 | ಶ್ರೀ. ವಿಜಯಕುಮಾರ ಬಸವಣಪ್ಪಾ ಪಾಟೀಲ | ನಿರ್ದೇಶಕರು |
| 6 | ಡಾ॥ ಹೆಮಂಗಿ ನೇಲವಾಡೆ | ಮೆ. ಮಿಟಕಾನ್ ಕನ್ಸ್‌ಲಟನ್ಸಿ & ಇಂಜಿನಿಯರಿಂಗ್ ಸರ್ವಿಸೆಸ್ ಲಿ. ಪುಣೆ. |
| 7 | ಸಾನಿಕಾ ಶೆಟ್ಟಿ | -ಅದೇ- |
| 8 | ಎಂ.ಕೆ. ಪಾಟೀಲ್ | ಡಿಸ್ಟಿಲರಿ ಕನ್ಸ್‌ಲಟಂಟ್ಸ್, ಬೆಳಗಾವಿ |

**ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರು: ಅನುಬಂಧ 1** ರಲ್ಲಿ ಲಗತ್ತಿಸಿದೆ.

ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ ಭಾರತ ಸರ್ಕಾರ, ನವದೆಹಲಿ, ಇವರ Terms of Reference ಪತ್ರದ ಸಂಖ್ಯೆ: IA-J-11011/309/2022-IA-II (1) New Delhi dated 16-8-2022ರಂತೆ ಹಾಗೂ ಜಿಲ್ಲಾಧಿಕಾರಿಗಳು, ಬೀದರ ಜಿಲ್ಲೆ, ಬೀದರ ರವರು ದಿನಾಂಕ: 28-11-2022ರಂದು ಸಮ್ಮತಿಸಿರುವ ಪ್ರಕಾರ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯವತಿಯಿಂದ ದಿನಾಂಕ:- 28/11/2022 ರಂದು ಬೆಳಿಗ್ಗೆ 11:00 ಗಂಟೆಗೆ ಮಾನ್ಯ ಜಿಲ್ಲಾಧಿಕಾರಿಗಳು, ಬೀದರ ಜಿಲ್ಲೆ, ಬೀದರ ಇವರ ಸಭಾಧ್ಯಕ್ಷತೆಯಲ್ಲಿ ಯೋಜನಾ ಸ್ಥಳದಲ್ಲಿ ಪರಿಸರ ಕುರಿತು ಸಾರ್ವಜನಿಕ ಆಲಿಕೆ ಸಭೆಯನ್ನು ಜರುಗಿಸಲಾಯಿತು.

ಪರಿಸರ ಆಘಾತ ಅಧ್ಯಯನದ ಅಧಿಸೂಚನೆ ದಿನಾಂಕ: 14-09-2006ರ (ತಿದ್ದುಪಡಿ ದಿನಾಂಕ:01-12-2009) ಪ್ರಕಾರ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಇವರಿಂದ 30 ದಿನಗಳ ಮುಂಚಿತ ಪತ್ರಿಕಾ ಪ್ರಕಟಣೆಯನ್ನು ನೀಡಲಾಗಿತ್ತು. ಸದರಿ ಪ್ರಕಟಣೆಯನ್ನು ರಾಜ್ಯ ಮಟ್ಟದಲ್ಲಿ ಪ್ರಚಲಿತ ದಿನ ಪತ್ರಿಕೆಯಾದ **"ಪ್ರಜಾ ವಾಣಿ"** ಹಾಗೂ ರಾಷ್ಟ್ರೀಯ ಮಟ್ಟದಲ್ಲಿ ಪ್ರಚಲಿತ ದಿನ ಪತ್ರಿಕೆಯಾದ **"The Hindu"** ಆಂಗ್ಲ ದಿನಪತ್ರಿಕೆಯಲ್ಲಿ ದಿನಾಂಕ: 21/10/2022ರಂದು ಹಾಗೂ ಜಿಲ್ಲೆಯಲ್ಲಿ ಪ್ರಚಲಿತವಿರುವ ಸ್ಥಳಿಯ ಕನ್ನಡ ದಿನಪತ್ರಿಕೆಯಾದ **"Karanja Express"** ದಿನಾಂಕ: 19/10/2022 ರಂದು ಪ್ರಕಟಣೆಯನ್ನು ನೀಡಲಾಗಿದೆ.

ಯೋಜನಾ ಸ್ಥಳದಲ್ಲಿರುವ ಹಾಗೂ ಸದರಿ ಯೋಜನೆಯಿಂದ ಪರಿಣಾಮಕ್ಕೆ ಒಳಗಾಗಬಹುದಾದ ರಹವಾಸಿಗಳು ಪರಿಸರ ಗುಂಪುಗಳು, ಹಾಗೂ ಇತರರ ಸಲಹೆ ಅಭಿಪ್ರಾಯ ಹಾಗೂ ಆಕ್ಷೇಪಣೆಗಳನ್ನು ಮೌಖಿಕವಾಗಿ ಅಥವಾ ಲಿಖಿತದಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಥವಾ ಅಧ್ಯಕ್ಷರು ಪರಿಸರ ಸಾರ್ವಜನಿಕ ಆಲಿಕೆ ಸಭೆ ಇವರಿಗೆ ಅಧಿಸೂಚನೆ ಪ್ರಕಟಣೆಯಾದ ದಿನಾಂಕದಿಂದ 30 ದಿನಗಳ ಒಳಗಾಗಿ ಮಂಡಿಸಲು ಅವಕಾಶವನ್ನು ನೀಡಲಾಗಿತ್ತು.

ತ್ವರಿತ ಪರಿಸರ ಆಘಾತ ಅಂದಾಜೀಕರಣದ ಕರಡು ವರದಿಯ ಪ್ರತಿಯನ್ನು ಹಾಗೂ ತ್ವರಿತ ಪರಿಸರ ಆಘಾತ ಅಂದಾಜೀಕರಣದ ಕರಡು ವರದಿಯ ಸಾರಾಂಶಗಳನ್ನು ಕನ್ನಡ ಹಾಗೂ ಆಂಗ್ಲ ಭಾಷೆಯಲ್ಲಿ ಸಾರ್ವಜನಿಕರ ಪರಾಮಾರ್ಷನೆಗೆ ಹಾಗೂ ಮಾಹಿತಿಗಾಗಿ ಈ ಕೆಳಗೆ ನಮೂದಿಸಿದ ಸ್ಥಳಗಳಲ್ಲಿ ಇಡಲಾಗಿತ್ತು.

1. ಜಿಲ್ಲಾಧಿಕಾರಿಗಳ ಕಛೇರಿ, ಬೀದರ, ಜಿಲ್ಲೆ: ಬೀದರ.
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಜಿಲ್ಲಾ ಪಂಚಾಯತ, ಬೀದರ.
3. ಜಿಲ್ಲಾ ಕೈಗಾರಿಕಾ ಕೇಂದ್ರ, ಬೀದರ.
4. ನಗರಸಭೆ, ಬೀದರ ಜಿಲ್ಲೆ.
5. ಗ್ರಾಮ ಪಂಚಾಯತ ಕಾರ್ಯಾಲಯ, ಜನವಾಡ.
6. ಪ್ರಾದೇಶಿಕ ಅಧಿಕಾರಿಗಳ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೀದರ ಜಿಲ್ಲೆ.
7. ಹಿರಿಯ ಪರಿಸರ ಅಧಿಕಾರಿಗಳು, ವಲಯ ಕಛೇರಿ, ಕ.ರಾ.ಮಾ.ನಿ.ಮಂಡಳಿ, ಕಲಬುರಗಿ.
8. ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ,ದಕ್ಷಿಣ ವಲಯ ಕಛೇರಿ ನಂ ಇ-3/240,ಕೇಂದ್ರೀಯ ಸದನ, 4ನೇ ಮಹಡಿ, ಇ ಮತ್ತು ಎಫ್ ವಿಂಗ್ಸ ಮುಖ್ಯ ರಸ್ತೆ, 17 ನೇ ಮುಖ್ಯ ರಸ್ತೆ, 2ನೇ ಬ್ಲಾಕ್, ಕೋರಮಂಗಳ, ಬೆಂಗಳೂರು.
9. ಸಹಾಯ ಕೇಂದ್ರ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ನೆಲ ಅಂತಸ್ತು, ನಂ.49, ಪರಿಸರ ಭವನ, ಚರ್ಚ್‌ಸ್ಟ್ರೀಟ್, ಬೆಂಗಳೂರು.

ದಿನಾಂಕ: 28/11/2022ರಂದು ಜರುಗಿಸಿದ ಸಾರ್ವಜನಿಕ ಆಲಿಕಾ ಸಭೆಗೆ ಆಗಮಿಸಿದ ಜಿಲ್ಲಾಧಿಕಾರಿಗಳು, ಬೀದರ, ಸಾರ್ವಜನಿಕರು, ಬೇರೆ ಬೇರೆ ಇಲಾಖೆಗಳ ಅಧಿಕಾರಿಗಳ, ಚುನಾಯಿತ ಪ್ರತಿನಿಧಿಗಳು ಹಾಗೂ ಸಂಸ್ಥೆಯ ಪದಾಧಿಕಾರಿಗಳು ಹಾಗೂ ಸಿಬ್ಬಂದಿಗಳಿಗೆ **ಶ್ರೀ. ಗೋಪಾಲಕೃಷ್ಣ ಬಿ.ಸಣತಂಗಿ, ಪರಿಸರ ಅಧಿಕಾರಿಗಳು** ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಪ್ರಾದೇಶಿಕ ಕಛೇರಿ, ಬೀದರ ಇವರು ಸ್ವಾಗತಿಸಿದರು. ಸದರಿಯವರು ಪರಿಸರ ಹಾಗೂ ಅರಣ್ಯ ಸಚಿವಾಲಯ ಭಾರತ ಸರ್ಕಾರ ಹಾಗೂ ಪರಿಸರ ಆಘಾತ ಅಧ್ಯಯನದ ಅಧಿಸೂಚನೆ ಪ್ರಕಾರ ಸಾರ್ವಜನಿಕ ವಿಚಾರಣೆಯ ಅವಶ್ಯಕತೆ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಿದರು. ಈ ಬಗ್ಗೆ 30 ದಿನಗಳ ಮುಂಚಿತವಾಗಿ ಪ್ರಕಟಣೆಯನ್ನು ನೀಡಲಾಗಿತ್ತು ಎಂದು ಹಾಗೂ ಸಾರ್ವಜನಿಕ ಆಲಿಕೆ ನಿಯಮಾವಳಿ ಬಗ್ಗೆ ವಿವರಗಳನ್ನು ನೀಡಿದರು. ಸದರಿಯವರು ಜಿಲ್ಲಾದಿಕಾರಿಗಳಿಗೆ ಸಭೆಯ ಅಧ್ಯಕ್ಷತೆಯನ್ನು ವಹಿಸಲು ಕೋರಿದರು ಹಾಗೂ ಸಾರ್ವಜನಿಕರಿಗೆ ಯೋಜನೆಯ ಬಗ್ಗೆ ತಮ್ಮ ಅಭಿಪ್ರಾಯ ಹಾಗೂ ವಿಚಾರಗಳನ್ನು ಮೌಖಿಕವಾಗಿ ಅಥವಾ ಲಿಖಿತದಲ್ಲಿ ಮಂಡಿಸಲು ಕೋರಿದರು. ಸಭೆಯ ನಡುವಳಿಗಳನ್ನು ಚಿತ್ರೀಕರಣ ಮಾಡಲಾಗುವುದು ಎಂದು ವಿವರಿಸಿದರು.

ಉದ್ದೇಶಿತ ಘಟಕದ ತಾಂತ್ರಿಕ ಸಲಹೆಗಾರರು (ಡಿಸ್ಟಿಲರಿ ಕನ್ಸಲಟಂಟ್ಸ್) ಎಮ್. ಕೆ. ಪಾಟೀಲ, ಇವರು ಕನ್ನಡದಲ್ಲಿ ಪ್ರಾಸ್ತಾವಿಕ ಯೋಜನೆಯ ಉದ್ದೇಶಗಳ ಬಗ್ಗೆ ಶಕ್ತಿ ಬಿಂದು ಪ್ರದರ್ಶನದ (PPT) ಮೂಲಕ ವಿವರಗಳನ್ನು ನೀಡಿದರು. ಸದರಿಯವರು ಯೋಜನಾ ಪ್ರಸಕ್ತ ಪ್ರದೇಶದಲ್ಲಿರುವ ಪ್ರಸ್ತುತ ಪರಿಸರ ದೃಶ್ಯ, ಸದರಿ ಯೋಜನೆಯಿಂದ ಪರಿಸರದ ಮೇಲೆ ಆಗಬಹುದಾದ ಪರಿಣಾಮ, ಪರಿಸರ ವ್ಯವಸ್ಥಾಪನೆ ಯೋಜನೆ, ಪರಿಸರ ಮಾಲಿನ್ಯವನ್ನು ನಿಯಂತ್ರಿಸಲು ರೂಪಿಸಿದ ಕ್ರಮಗಳು ಇತ್ಯಾದಿಗಳ ಬಗ್ಗೆ ವಿವರಗಳನ್ನು ಮಂಡಿಸಿದರು. ಇದರ ಪ್ರತಿಯನ್ನು **ಅನುಬಂಧ – 2** ರ ಮೂಲಕ ಲಗತ್ತಿಸಲಾಗಿದೆ.

ಪರಿಸರ ಸಾರ್ವಜನಿಕ ಆಲಿಕೆ ಸಭೆಯಲ್ಲಿ ಈ ಕೆಳಕಂಡ ಸಾರ್ವಜನಿಕರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು, ಅದರ ವಿವರಗಳು ಈ ಕೆಳಗಿನಂತಿವೆ.

1. **ರಮೇಶ ತಂದೆ ಶಾಂತಪ್ಪಾ ಕಡಗಂಚಿ, ಖಟಕಚಿಂಚೋಳಿ:-** ಒಂದು ಸಕ್ಕರೆ ಕಾರ್ಖಾನೆ ಉತ್ತಮ ರೀತಿಯಲ್ಲಿ ನಡೆಯಲು ಕೇವಲ ಸಕ್ಕರೆ ಉತ್ಪಾದನೆಯೊಂದೇ ಸಾಕಾಗುವುದಿಲ್ಲಾ. ಅದರ ಉಪಉತ್ಪನ್ನಗಳನ್ನು ಉತ್ಪಾದಿಸಿದರೆ ಕಾರ್ಖಾನೆಯ ಆರ್ಥಿಕ ಲಾಭ ಸುಧಾರಿಸುತ್ತದೆ. ಅದೇ ರೀತಿ ರೈತರಿಗೆ ಹೆಚ್ಚಿನ ದರ ಸಿಗುತ್ತದೆ. ರೈತರು ಮಿಶ್ರ ಕೃಷಿ ಬೇಸಾಯದಿಂದ ಹೇಗೆ ಹೆಚ್ಚಿನ ಲಾಭ ಪಡೆಯುತ್ತಾರೋ ಅದೇ ರೀತಿ ಕಾರ್ಖಾನೆಯಿಂದ ಸಕ್ಕರೆ ಉಪ-ಉತ್ಪನ್ನಗಳನ್ನು ತಯಾರಿಸಿದರೆ ಕಾರ್ಖಾನೆಗೆ ಲಾಭ ಬರುತ್ತದೆ. ಕೋ-ಜನರೇಶನ, ಎಥಾನಾಲ್, ಬಗ್ಯಾಸ್ ಇವುಗಳಿಂದ ಕಾರ್ಖಾನೆಗೆ ಲಾಭ ಉಂಟಾಗುತ್ತದೆ. ಆದುದರಿಂದ ಡಿಸ್ಟಿಲರಿ ಘಟಕ ಸ್ಥಾಪನೆಗೆ ನಮ್ಮ ಸಹಕಾರ ಇದೆ ಎಂದು ತಿಳಿಸಿದರು.

2. **ಶ್ರೀ ಸತೀಶ ಬಿರಾದಾರ, ಬಾತಂಬ್ರಾ:-** ಕೇವಲ ಸಕ್ಕರೆ ಕಾರ್ಖಾನೆಯಿಂದ ರೈತರಿಗೆ ಉಪಯೋಗವಿಲ್ಲ. ಆದುದರಿಂದ ಉಪ ಉತ್ಪನ್ನಗಳನ್ನು ತಯಾರಿಸುವುದರಿಂದ ಕಾರ್ಖಾನೆಗೂ ಮತ್ತು ರೈತರಿಗೂ ಲಾಭವಾಗುತ್ತದೆ. ಘಟಕ ಸ್ಥಾಪನೆಗೆ ನಮ್ಮ ಸಹಾಕಾರ ಇದೆ ಎಂದು ತಿಳಿಸಿದರು.

3. **ಶ್ರೀ ಎಕನಾಥ ಮೇತ್ರೆ, ತರನಳ್ಳಿ:-** ಡಿಸ್ಟಿಲರಿ ಘಟಕ ಸ್ಥಾಪನೆಗೆ ನಮ್ಮ ಸಹಾಕಾರ ಇದೆ ಎಂದು ತಿಳಿಸಿದರು.

4. **ಶ್ರೀ ಕೈಲಾಶ ಪಾಟೀಲ ನಾಗರಾಳ್:-** ಘಟಕ ಸ್ಥಾಪನೆಯಿಂದ ಉದ್ಯೋಗ ಸೃಷ್ಟಿಯಾಗುತ್ತದೆ. ಡಿಸ್ಟಿಲರಿ ಘಟಕ ಸ್ಥಾಪನೆಯಿಂದ ರೈತರ ಕಬ್ಬಿಗೆ ಹೆಚ್ಚಿನ ಬೆಲೆ ಸಿಗುತ್ತದೆ ಎಂದು ತಿಳಿಸಿದರು.

5. **ಶ್ರೀ ಶರತ, ದುರ್ಗಾಳೆ ಬೋಳೆಗಾಂವ್:-** ಘಟಕ ಸ್ಥಾಪನೆಯಿಂದ ಉದ್ಯೋಗಕ್ಕಾಗಿ ಬೇರೆ ಸ್ಥಳಕ್ಕೆ ಅಲೆದಾಡುವುದು ತಪ್ಪುತ್ತದೆ. ಡಿಸ್ಟಿಲರಿ ಘಟಕ ಸ್ಥಾಪನೆಯಿಂದ ರೈತರಿಗೂ ಹಾಗೂ ಕಾರ್ಖಾನೆಗೂ ಲಾಭವಾಗುತ್ತದೆ ಎಂದು ತಮ್ಮ ಅನಿಸಿಕೆಯನ್ನು ತಿಳಿಸಿದರು.

6. **ಶ್ರೀ ಸಂಗಮೇಶ ಟಂಕಾಲೆ, ಭಾತಂಬ್ರಾ:-** ಸಕ್ಕರೆ ಕಾರ್ಖಾನೆಯ ಬೈಪ್ರೋಡಕ್ಟನಿಂದ ಕಾರ್ಖಾನೆಯ ಜೊತೆಗೆ ರೈತರ ಲಾಭವೂ ದ್ವಿಗುಣವಾಗುತ್ತದೆ ಎಂದು ತಿಳಿಸಿದರು.

7. **ಶ್ರೀ ಸಿದ್ದು ಕಾಡೋದಿ, ಧನ್ನೂರ:-** ಡಿಸ್ಟಿಲರಿ ಘಟಕ ಸ್ಥಾಪಿಸಲು ತಮ್ಮ ಒಪ್ಪಿಗೆ ಸೂಚಿಸಿದರು.

8. **ಶ್ರೀ ರಾಮರಾವ ಕಿಶನರಾವ್ ಬೆನಕನಳ್ಳಿ:-** ನಮ್ಮ ಊರಿನಲ್ಲಿ ಘಟಕ ಸ್ಥಾಪನೆಯಾಗುತ್ತಿರುವುದು ಸಂತೋಷವಾಗುತ್ತಿದೆ ಎಂದು ತಳಿಸಿದರು.

9. **ಶ್ರೀ ದೀಲಿಪ ತರನಳ್ಳಿ:-** ಘಟಕ ಸ್ಥಾಪನೆಯಿಂದ ದೊರೆಯುವ ಸಾವಯವ ಗೊಬ್ಬರದಿಂದ ರಾಸಾಯನಿಕ ಗೊಬ್ಬರ ಬಳಕೆ ಕಡಿಮೆಯಾಗುತ್ತದೆ. ಈ ಘಟಕ ಸ್ಥಾಪನೆಯಿಂದ ಆರ್ಥಿಕ ಪರಿಸ್ಥಿತಿ ಸುಧಾರಣೆಯಾಗುತ್ತದೆ ಮತ್ತು ಶಿಕ್ಷಣ ಪಡೆದವರಿಗೆ ಉದ್ಯೋಗ ದೊರೆಯುತ್ತದೆ. ಅಕ್ಕಪಕ್ಕ ಗ್ರಾಮದ ಶಿಕ್ಷಣ ಸಂಸ್ಥೆಗಳಿಗೆ ಸಿಎಸ್ಆರ್ ಅನುದಾನದಿಂದ ಲಾಭವಾಗುತ್ತದೆ. ಡಿಸ್ಟಿಲರಿ ಘಟಕ ಸ್ಥಾಪನೆಯಿಂದಾಗಿ ನಮಗೆ ಯಾವುದೇ ತೊಂದರೆಯಾಗುವುದಿಲ್ಲ ಅಲ್ಲದೇ ನಾವುಗಳು ಅಭಿವೃದ್ಧಿ ಪಥದಲ್ಲಿ ಸಾಗುತ್ತೇವೆ. ಇದರಿಂದ ಬೀದರ ಹಿಂದುಳಿದ ಜಿಲ್ಲೆ ಎಂಬ ಹಣೆಪಟ್ಟಿ ಕಳೆದುಕೊಳ್ಳಬಹುದು ಎಂದು ತಿಳಿಸಿದರು.

10. **ಶ್ರೀ ಚನ್ನಕೇಶವರೆಡ್ಡಿ ಹೈದ್ರಾಬಾದ:-** ತ್ಯಾಜ್ಯ ಸಂಸ್ಕರಣ ಘಟಕಗಳಾದ ಎಸ್.ಟಿ.ಪಿ. ಯನ್ನು ಉತ್ತಮ ರೀತಿಯಲ್ಲಿ ನಿರ್ಮಿಸಬೇಕು ಮತ್ತು ಇ.ಟಿ.ಪಿ.ಗೆ Online Flow Meter ಅಳವಡಿಸಿ ದಿನದ 24 ಗಂಟೆ ಕಾರ್ಯಚರಣೆಯಲ್ಲಿರುವಂತೆ ನೋಡಿಕೊಳ್ಳಬೇಕು. ನೆಲ, ಗಾಳಿ ಮತ್ತು ನೀರಿನ ಗುಣಮಟ್ಟವನ್ನು ಉತ್ತಮವಾಗಿರುವಂತೆ ನೋಡಿಕೊಳ್ಳಬೇಕು. ಸಿಎಸ್‌ಆರ್ ಅನುದಾನವನ್ನು ಉತ್ತಮವಾಗಿ ಬಳಕೆಯಾಗಬೇಕು. ಪ್ರಸ್ತುತ ಚಾಲ್ತಿಯಲ್ಲಿರುವ ಸಕ್ಕರೆ ಕಾರ್ಖಾನೆಯ ಸಿಎಸ್‌ಆರ್ ಅನುದಾನ ಒದಗಿಸಿರುವ ಬಗ್ಗೆ ವಿವರವನ್ನು ಕೇಳಿದರು. ಡಿಸ್ಟಿಲರಿ ಘಟಕ ಸ್ಥಾಪನೆ ಮಾಡುವ ಸಲುವಾಗಿ ಭೂಮಿಯನ್ನು ಕಳೆದುಕೊಂಡವರಿಗೆ ಖಾಯಂ ಉದ್ಯೋಗವನ್ನು ನೀಡಬೇಕು ಎಂದು ತಿಳಿಸಿದರು.

11. **ಶ್ರೀಮತಿ ಮಂಜುಳಾ, ಜ್ಞಾನಕೇಂದ್ರ ಸೇವಾ ಸಂಸ್ಥೆ, ಚಿತ್ರದುರ್ಗ:-** ನಿರುದ್ಯೋಗ ನಿರ್ಮೂಲನೆ ಮಾಡಲು ಕಾರ್ಖಾನೆಗಳ ಸ್ಥಾಪನೆ ಅವಶ್ಯಕತೆ ಇದೆ. ಘಟಕದ ಸ್ಥಾಪನೆಯಿಂದ ಸ್ಥಳಿಯರಿಗೆ ಉದ್ಯೋಗ ದೊರೆಯುತ್ತದೆ. ಸ್ಥಳೀಯರಿಗೆ ಹಾಗೂ ರೈತರಿಗೆ ಯಾವುದೇ ರೀತಿ ಹಾನಿಯಾಗದಂತೆ ಕಾರ್ಯನಿರ್ವಹಿಸಬೇಕು ಎಂದು ತಿಳಿಸಿದರು.

12. **ಶ್ರೀ ಎಮ್. ಸತ್ಯನಾರಾಯಣ ಹೈದ್ರಾಬಾದ:-** ಪರಿಸರ ಮಾಲಿನ್ಯ ನಿಯಂತ್ರಣ ಉಪಕರಣಗಳು ಉತ್ತಮವಾದ ರೀತಿಯಲ್ಲಿ ಸ್ಥಾಪಿಸಬೇಕು ಇಲ್ಲಾವಾದರೆ ಅಂಗವಿಕಲತೆಯಾಗುವ ಸಾಧ್ಯತೆ ಇದೆ. ಅಂಗವಿಕಲರಿಗೆ ಶೇ.5% ರಷ್ಟು ಉದ್ಯೋಗ ನೀಡಬೇಕು. ಸಿಎಸ್‌ಆರ್ ಅನುದಾನದಲ್ಲಿ ಅಂಗವಿಕಲರಿಗೆ ಮೂರು ಚಕ್ರದ ಸೈಕಲ್ ನೀಡಬೇಕು ಎಂದು ತಿಳಿಸಿದರು.

13. **ಶ್ರೀ ಪ್ರದೀಪ್ ಎಚ್. ಚಿತ್ರದುರ್ಗ:-** ಘಟಕ ಸ್ಥಾಪನೆಯಿಂದ ಅಕ್ಕ-ಪಕ್ಕ ಗ್ರಾಮದ ನಿರುದ್ಯೋಗಿಗಳಿಗೆ ಉದ್ಯೋಗ ದೊರೆಯಲು ಅನುಕೂಲವಾಗುತ್ತದೆ ಎಂದು ತಿಳಿಸಿದರು.

14. **ಶ್ರೀ ನಾಗೇಂದ್ರ ವೈಜಿನಾಥರಾವ ಪಾಟೀಲ, ಗ್ರಾಮ ಚಾಂಬೋಳ:-** ಘಟಕ ಸ್ಥಾಪನೆಯಿಂದ ಕಾರ್ಖಾನೆಗೆ ಹಾಗೂ ರೈತರಿಗೆ ಆರ್ಥಿಕವಾಗಿ ಲಾಭವಾಗುತ್ತದೆ, ಈ ಲಾಭವನ್ನು ಪ್ರತಿ ರೈತರಿಗೆ ತಲುಪಿಸಬೇಕು. ಘಟಕದ ಸ್ಥಾಪನೆಯಿಂದ ಉದ್ಯೋಗ ಸೃಷ್ಟಿಯಾಗುವ ಬಗ್ಗೆ ಹರ್ಷ ವ್ಯಕ್ತಪಡಿಸಿದರು. ಅತೀ ಶೀಘ್ರದಲ್ಲಿ ಈ ಉದ್ದೇಶಿತ ಘಟಕ ಸ್ಥಾಪಿಸಲು ತಿಳಿಸಿದರು.

15. **ಶ್ರೀ ಎಮ್. ಕೃಷ್ಣಮೂರ್ತಿ, ಹೈದ್ರಾಬಾದ:-** ಶೇ. 10% - 15% ರಷ್ಟು ಸಿಎಸ್‌ಆರ್ ಅನುದಾನದಿಂದ ಸುತ್ತಮುತ್ತಲಿನ ಸಮುದಾಯಗಳ ಅಭಿವೃದ್ಧಿಗೆ, ನೀರು ಶುದ್ದೀಕರಣ ಘಟಕಕ್ಕೆ ಹಾಗೂ ಇತರೆ ಅಭಿವೃದ್ಧಿ ಕಾರ್ಯಗಳಿಗೆ ಒದಗಿಸಬೇಕು. ಸದರಿ ಘಟಕದಿಂದ ನಿರುದ್ಯೋಗಿಗಳಿಗೆ ಉದ್ಯೋಗದ ಅನುಕೂಲವಾಗುತ್ತದೆ. ಘಟಕದ ಸ್ಥಾಪಿಸಲು ಆದಷ್ಟು ಬೇಗ ಇ.ಸಿ. ಒದಗಿಸಲು ಕೇಳಿಕೊಂಡರು.

ಮಾನ್ಯ ಜಿಲ್ಲಾಧಿಕಾರಿಗಳು ಹಾಜರಿದ್ದ ಸಾರ್ವಜನಿಕರಿಗೆ ಈಗಾಗಲೇ ಕನ್ಸಲ್ಟೆಂಟ್ಸ್ ರವರ ಪ್ರಕಾರ ಯಾವುದೇ ರೀತಿಯ ದ್ರವ ರೂಪದ ತ್ಯಾಜ್ಯ ಹೊರಗಡೆ ಬರದಂತೆ ಸಂಸ್ಕರಣೆ ವ್ಯವಸ್ಥೆ ಮಾಡಲಾಗುತ್ತದೆ. ಇದರಿಂದ ಬರುವ ಸ್ಪೆಂಟ್ ವಾಶ್‌ನ್ನು ರಿಸೈಕಲರ್‌ಗೆ ಕಳುಹಿಸಲಾಗುತ್ತದೆ. ಡಿಸ್ಟಿಲರಿ ಘಟಕ ಸ್ಥಾಪನೆಯಿಂದ ನೆಲ, ಜಲ, ಶಬ್ದ ಹಾಗೂ ವಾಯು ಮಾಲಿನ್ಯ ಕುರಿತು ಲಿಖಿತ ಅಥವಾ ಮೌಖಿಕವಾಗಿ ಆಕ್ಷೇಪಣೆಯನ್ನು ಸಲ್ಲಿಸಬಹುದು ಎಂದು ತಿಳಿಸಿದರು. ಮುಂದುವರೆದು, 17 ಜನರು/ ಸಂಸ್ಥೆಯವರು ತಮ್ಮ ಸಲಹೆ/ ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ಮಾನ್ಯ ಜಿಲ್ಲಾಧಿಕಾರಿಯವರಿಗೆ ಮಂಡಿಸಿದರು. ಸದರಿ 17 ಲಿಖಿತ ಪತ್ರಗಳ ಪ್ರತಿಯನ್ನು **ಅನುಬಂಧ – 4** ರಲ್ಲಿ ಲಗತ್ತಿಸಲಾಗಿದೆ.

1. ಡಾ॥ ಬಿ.ಆರ್.ಅಂಬೇಡ್ಕರ, ಸಾಹಿತ್ಯ ಸಾಂಸ್ಕೃತಿಕ ಕ್ರೀಡಾ ಕಲಾ ಯುವಕರ ಸಂಘ(ರಿ).
2. ಸ್ನೇಹಾ ಭಾಂದವ್ಯ ಅಂಧರ ಸೇವಾ ಟ್ರಸ್ಟ್(ರಿ), ಚಿಕ್ಕಾಬಳ್ಳಾಪುರ.
3. ಅಕ್ಷರ ಗ್ರಾಮೀಣ ವಿಕಾಸ ಸಂಸ್ಥೆ, ಚಿತ್ರದುರ್ಗಾ.
4. ವರ್ಷಾ ಪರಿಸರವಾಧಿಗಳು, ಅನಂತಪುರ
5. ಅಕ್ಷರ ಗ್ರಾಮೀಣ & ನಗರ ಪರಿಸರ ಅಭಿವೃದ್ಧಿ ಸಂಸ್ಥೆ, ಚಿತ್ರದುರ್ಗಾ
6. ಶಾಲಿನಿ ಪರಿಸರ ಮತ್ತು ಶಿಕ್ಷಣ ಸಂಸ್ಥೆ, ಅನಂತಪುರಂ.

7. ನೇಚರ ಎನ್ವರೆಮೆಂಟ್ ಪ್ರೋಟೆಕ್ಷನ್, ಹೈದ್ರಾಬಾದ.
8. ಮೀನಾಕ್ಷಿ ಗ್ರಾಮೀಣ ಅಭಿವೃದ್ಧಿ ಸಂಸ್ಥೆ, ಬಳ್ಳಾರಿ.
9. ಮದರ್ ಡ್ರಿಮ್ಸ್ ರೂರಲ್ & ಅರ್ಬನ್ ಎಜಜುಕೇಶನ್ ಡೆವಲೆಪಮೆಂಟ್ ಸೋಸೈಟಿ(ರಿ), ಚಿತ್ರದುರ್ಗಾ.
10. ಮೇಟ್ರೊ ಅರ್ಬನ್ & ರೂರಲ್ ಅಭಿವೃದ್ಧಿ ಸೋಸೈಟಿ, ಹೈದ್ರಾಬಾದ.
11. ಧರಣಿ ಎನ್ವರೆಮೇಂಟ್ ಸೋಸೈಟಿ, ವಿಜಯವಾಡ.
12. ರೈಟ್ ವೇ ಗ್ಲೋಬಲ್ ಆರ್ಗಾನೈಜೇಶನ್, ಹೈದ್ರಾಬಾದ.
13. ಪ್ರಜಾ ಸಮಸ್ಯಾಲು ಪರಿಕ್ಷಾರ ವೇದಿಕಾ, ನೇಲ್ಲಾಗೊಂಡಾ ಜಿಲ್ಲೆ.
14. ಪೈಟ್ ಅಗೇನೆಸ್ಟ್ ಗ್ಲೋಬಲ್ ವಾರ್ಮಿಂಗ್, ಹೈದ್ರಾಬಾದ.
15. ವೈಎಮ್ಎನ್ಆರ್ ಚಾರಿಟೇಬಲ್ ಟ್ರಸ್ಟ್, ಅನಂರಪುರಂ.
16. ಜಿ.ಕೆ. ಎಜುಕೇಶನ್ ಮತ್ತು ರೂರಲ್ ಅರ್ಬನ್ ಡೆವಲೆಪಮೆಂಟ್ ಸೋಸೈಟಿ(ರಿ), ಚಿತ್ರದುರ್ಗಾ.
17. ದಂಡಾ ಕೊಂಡಮ್ಮಾ ಚಾರಿಟೇಬಲ್ ಟ್ರಸ್ಟ್, ಹೈದ್ರಾಬಾದ.

ಮಾನ್ಯ ಜಿಲ್ಲಾಧಿಕಾರಿಗಳು ಸಾರ್ವಜನಿಕರಿಗೆ ಇಲ್ಲಿಯವರೆಗೆ ತಾವುಗಳು ಮೌಖಿಕವಾಗಿ ಹೇಳಿರುವ ಹಾಗೂ ಲಿಖಿತವಾಗಿ ನೀಡಿರುವ ಹೇಳಿಕೆಗಳನ್ನು, ಆಡಿಯೋ/ ವಿಡಿಯೋವನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು MoEF & CC ಇವರಿಗೆ ಕಳುಹಿಸಿಕೊಡಲಾಗುವುದು ನಂತರ ಅನುಮತಿ ಕೊಡುತ್ತಾರೆ ಎಂದು ತಿಳಿಸಿದರು. ಈ ಪರಿಸರ ಸಾರ್ವಜನಿಕ ಆಲಿಕೆ ಸಭೆಯಲ್ಲಿ ಸಾರ್ವಜನಿಕರು ಪರಿಸರ ಮಾಲಿನ್ಯಕ್ಕೆ ಸಂಬಂಧಿಸಿದಂತೆ ಯಾವುದೇ ಆಕ್ಷೇಪಣೆ ನೀಡದೇ ಸಹಮತವನ್ನು ನೀಡಿರುವುದರಿಂದ ಘಟಕ ಸ್ಥಾಪನೆಗೆ ಪರಿಗಣಿಸಬಹುದೆಂದು ತಿಳಿಸಿದರು.

ಅಂತಿಮವಾಗಿ ಶ್ರೀ ಗೋಪಾಲಕೃಷ್ಣ ಬಿ. ಸಣತಂಗಿ, ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಪ್ರಾದೇಶಿಕ ಕಛೇರಿ, ಬೀದರ, ಇವರು ಸಭೆಯ ಅಧ್ಯಕ್ಷತೆಯನ್ನು ವಹಿಸಿದ ಮಾನ್ಯ ಜಿಲ್ಲಾಧಿಕಾರಿಗಳು, ಬೀದರ, ಹಿರಿಯ ಪರಿಸರ ಅಧಿಕಾರಿಗಳು, ಕ.ರಾ.ಮಾ.ನಿ.ಮಂ.,ವಲಯ ಕಛೇರಿ, ಕಲಬುರಗಿ ಇವರಿಗೆ ಹಾಗೂ ಇತರೆ ಇಲಾಖೆಯ ಅಧಿಕಾರಿಗಳಿಗೆ, ನಿಯೋಜಿತ ಘಟಕದ ಸಂಚಾಲಕರಿಗೆ, ಸಿಬ್ಬಂಧಿಗಳಿಗೆ, ಸಾರ್ವಜನಿಕ ಮಾಧ್ಯಮದವರಿಗೆ ಮತ್ತು ಪೋಲಿಸ್ ಸಿಬ್ಬಂದಿಯವರಿಗೆ ತಮ್ಮ ಮಂಡಳಿ ಪರವಾಗಿ ವಂದನೆಗಳನ್ನು ಸಲ್ಲಿಸಿದರು.

**ಶ್ರೀ ಗೋವಿಂದ ರೆಡ್ಡಿ, ಭಾ. ಆ. ಸೇ,**
**ಜಿಲ್ಲಾಧಿಕಾರಿಗಳು ಬೀದರ ಜಿಲ್ಲೆ, ಬೀದರ.**

** * **